**ಕರ್ನಾಟಕ ಸರ್ಕಾರ**

*ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-12.*

ಇಮ್ಮೈಲ್: commissioner.pue@gmail.com ಫೋನ್: 080-23561944, ಫ್ಯಾಕ್ಸ್: 23361852

ಸಂಖ್ಯೆ: ಪಿಯುಇ/ಕಟ್ಟಡ-03/ನಿವೇಶನ-02/ಆಸೊವ/2016-17, ದಿನಾಂಕ: 12-09-2016.

## ಸುತ್ತೋಲೆ

**ವಿಷಯ:** ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಆಸ್ತಿ ಮತ್ತು ಸ್ವತ್ತುಗಳ ರಕ್ಷಣೆಗೆ ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸುವ ಕುರಿತು.

**ಉಲ್ಲೇಖ:** ಈ ಕಛೇರಿಯ ಸುತ್ತೋಲೆ ಸಂಖ್ಯೆ: ಪಪೂಶಿಇ/ಶೈಶಾ-3/ಆರ್‌ಐಡಿಎಫ್/09/2010-11 ದಿನಾಂಕ: 30-04-2010.

* * *

ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ನಿವೇಶನ ಒತ್ತುವರಿ ಹಾಗೂ ದುರುಪಯೋಗವಾಗುತ್ತಿರುವ ಬಗ್ಗೆ ಈ ಕಛೇರಿಯ ಮತ್ತು ಸರ್ಕಾರದ ಗಮನಕ್ಕೆ ಬರುತ್ತಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ನಿವೇಶನಗಳ ರಕ್ಷಣೆಗಾಗಿ ಈಗಾಗಲೇ ಉಲ್ಲೇಖಿತ ಸುತ್ತೋಲೆಯಲ್ಲಿ ಉಸ್ತುವಾರಿ ಮತ್ತು ಸಂರಕ್ಷಣಾಧಿಕಾರಿಗಳನ್ನು ನೇಮಿಸಲಾಗಿದೆ. ಅದರಂತೆ ಸಂಬಂದಿಸಿದ ಕಾಲೇಜುಗಳ ಪ್ರಾಚಾರ್ಯರುಗಳೇ ಕಾಲೇಜು ಮಟ್ಟದ ಜಮೀನು ಸಂರಕ್ಷಣಾಧಿಕಾರಿಗಳಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳೇ ಜಿಲ್ಲಾ ಮಟ್ಟದ ಜಮೀನು ಸಂರಕ್ಷಣಾಧಿಕಾರಿಗಳಾಗಿರುತ್ತಾರೆ.

ರಾಜ್ಯದಲ್ಲಿ ಹಾಲಿ ನಡೆಯುತ್ತಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ನಿವೇಶನಗಳ ಅವಶ್ಯಕತೆ ಇರುವುದು ಹಲವು ಸಭೆಗಳಲ್ಲಿ ಮತ್ತು ಇತರೆ ಮೂಲಗಳಿಂದ ವ್ಯಕ್ತವಾಗಿರುತ್ತದೆ. ಅದರಂತೆ ಅಂತಹ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ನಿವೇಶನವನ್ನು ಪಡೆಯುವ ಸಂಬಂಧಿಸಿದ ನಗರ ಪ್ರದೇಶಗಳಲ್ಲಿ ನಿವೇಶನವನ್ನು ಹಂಚಿಕೆ ಮಾಡಲು ಅಧಿಕಾರವಿರುವ ಪ್ರಾಧಿಕಾರಿಗಳನ್ನು ಹಾಗೂ ಇತರೆ ಪ್ರದೇಶಗಳಲ್ಲಿ ಸಂಬಂದಿಸಿದ ತಹಶೀಲ್ದಾರ್ / ಉಪವಿಭಾಗಾಧಿಕಾರಿಗಳು / ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ನಿವೇಶನವನ್ನು ಪಡೆಯಲು ಕ್ರಮವಹಿಸುವುದು. ಅಲ್ಲದೆ ಈಗಾಲೇ ನಿವೇಶನ / ಭೂಮಿಯನ್ನು ಹೊಂದಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಪ್ರಾಚಾರ್ಯರು ಹಾಗೂ ಸಂಬಂದಿಸಿದ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರು ತಮ್ಮ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಕಟ್ಟಡಗಳು ಆಟದ ಮೈದಾನ, ಗ್ರಂಥಾಲಯಗಳು ಮತ್ತು ಕಛೇರಿಗಳು ಹಾಗೂ ಇಲಾಖೆಯ ಎಲ್ಲಾ ಆಸ್ತಿಗಳು ಮತ್ತು ನಿವೇಶನಗಳನ್ನು ಸರ್ವೆ ಮಾಡಿಸಿ, ನಕಾಶೆಯನ್ನು ಪಡೆದು ಸಂಬಂದಿಸಿದ ಕಾಲೇಜಿನ ಆಸ್ತಿಯ ಖಾತೆಯನ್ನು ನಿಯಮಾನುಸಾರ ಸಂಬಂದಿಸಿದ ಇಲಾಖೆಯಿಂದ ಪಡೆಯಲು ಕ್ರಮವಹಿಸಲು ಸೂಚಿಸಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ನಿವೇಶನದ ಮತ್ತು ಆಸ್ತಿಗಳ ಬಗ್ಗೆ ಎಲ್ಲಾ ಕಾಲೇಜುಗಳಲ್ಲಿ ಪ್ರಾಪರ್ಟಿ ವಹಿಯನ್ನು ನಿರ್ವಹಿಸಲು ಸೂಚಿಸಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ತಮ್ಮ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ನಿವೇಶನಗಳಿಗೆ ಪ್ರಾಪರ್ಟಿ ವಹಿಯನ್ನು ನಿರ್ವಹಿಸಲು ಸೂಚಿಸಿದೆ.

ಸಹಿ/-
ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಗಳು:**

1. ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖಾ ಜಿಲ್ಲಾ ಉಪನಿರ್ದೇಶಕರುಗಳಿಗೆ.
2. ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ – ಉಪನಿರ್ದೇಶಕರುಗಳ ಮುಖಾಂತರ.
3. ಹೆಚ್ಚುವರಿ/ಕಛೇರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಸಚಿವರು, ಕೊಠಡಿ ಸಂಖ್ಯೆ: 262/262ಎ, 2ನೇ ಮಹಡಿ, ವಿಧಾನ ಸೌಧ, ಬೆಂಗಳೂರು.

15/9

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ